ಜನರ ಗದ್ದಲದ ಹೊರತಾಗಿಯೂ ಹವೆ ತಂಪಾಗಿದ್ದುದರಿಂದ ಹೆಚ್ಚು ಬೆವರಿರಲಿಲ್ಲ. ಮುಖ ತೊಳೆದದ್ದೇ ಇಡೀ ದೇಹದ ಜೊತೆಗೆ ಮನಸ್ಸೂ ಪ್ರಫುಲ್ಲಿತವಾದಂತೆನಿಸಿತು.

ಸ್ಟೇಶನ್ ಬಂದೇ ಬಿಟ್ಟಿತು. ಹೆಚ್ಚಿನ ಲಗೇಜ್ ಏನೂ ಇರಲಿಲ್ಲ. ಒಂದು ತುಸು ದೊಡ್ಡದೇ ಅನ್ನಬಹುದಾದ ಬ್ಯಾಕ್ ಪ್ಯಾಕ್. ಈ ಊರಿನಲ್ಲಿ ಬಹಳ ದಿನ ಇರುವ ಅಗತ್ಯ ಮತ್ತು ಆತುರ ಎರಡೂ ಇಲ್ಲದ ಅವ ಹೆಚ್ಚಿನ ಬಟ್ಟೆ ಬರೆಗಳನ್ನೂ ತಂದಿರಲಿಲ್ಲ. ಸಂಜೆ ತಿರುಗಿ ಹೋಗುವ ಮುನ್ನ ಅಗತ್ಯಕ್ಕೆಷ್ಟು ಬೇಕೋ ಅಷ್ಟೇ. ಹೆಚ್ಚೆಂದರೆ ಇನ್ನೊಂದು ದಿನ. ಆ ಹಗುರವಾದ ಬ್ಯಾಕ್ ಪ್ಯಾಕನ್ನು ಹೆಗಲಿಗೇರಿಸಿಕೊಂಡು ಟ್ರೈನ್‌ನಿಂದ ಕೆಳಗಿಳಿದ.

ಪ್ಲಾಟ್‌ಫಾರ್ಮಿನ ನೆಲಕ್ಕೆ ಕಾಲು ತಾಗಿಸಿದ್ದೇ ನೆನಪುಗಳು ನುಗ್ಗಿ ಬಂದವು. ಕೆಲವೊಂದು ಸಿಹಿ. ಹೆಚ್ಚಿನವು ಕಹಿ. ಆದರೆ ಮನಸ್ಸು ಹಾತೊರೆಯವಂತೆ ಆ ಸಿಹಿ ನೆನಪುಗಳದ್ದೇ ಮೇಲಾಟ.

★★★

ಅವನು ಊರು ಬಿಡುವಾಗ ಆಗಿನ್ನೂ ರೈಲ್ವೇ ಲೈನಿನ ಕೆಲಸ ಮುಗಿದು ಟ್ರೈನು ಸರ್ವೀಸು ಪ್ರಾರಂಭವಾಗಿತ್ತಷ್ಟೆ. ತಮ್ಮ ಊರಿಗೆ ರೈಲ್ವೇ ಲೈನು ಸ್ಯಾಂಕ್ಷನ್ ಆಗಿದೆಯೆಂದಾಗಲೇ ವಯಸ್ಸಿಗೆ ಕಾಲಿಡುತ್ತಿದ್ದ ತಮಗೆಲ್ಲ ಎಂತಹ ಸಂಭ್ರಮ. ಇದುವರೆಗೆ ಪ್ರಾಥಮಿಕ ಮತ್ತು ಹೈಸ್ಕೂಲು ತರಗತಿಗಳಲ್ಲಿ ಕಲಿಯುವಾಗ ತಮ್ಮ ಊರಿನ ಹೆಸರೇ ಇಲ್ಲದಿರುತ್ತಿದ್ದ ರೈಲ್ವೇ ಭೂಪಟದಲ್ಲಿ ತಮ್ಮ ಊರಿನ ಹೆಸರೂ ಸೇರುತ್ತದೆ. ಮುಂದಿನ ಹುಡುಗರು ಕಲಿಯುವಾಗ ತಮ್ಮ ಊರಿನ ಹೆಸರನ್ನೂ ನೋಡುತ್ತಾರೆ. ಈಗಂತೂ ತಾವೆಲ್ಲ ಅದರ ಉಪಯೋಗ ಪಡೆಯಬಹುದು. ಪರ ಊರಿಗೆ ಹೋಗಬೇಕೆಂದಾಗಲೆಲ್ಲ ಆ ಹೊಂಡ ಕುಳಿಗಳ ರಸ್ತೆಗಳಲ್ಲಿ ಏಳುತ್ತ ಬೀಳುತ್ತ ಓಡಾಡುವ ಬಸ್ಸುಗಳಲ್ಲಿ ಬೆನ್ನು ಮುರಿದುಕೊಳ್ಳುತ್ತ ಕುಳಿತುಕೊಳ್ಳುವ ಸಂಕಟ ತಪ್ಪುತ್ತದಲ್ಲ ಎನ್ನುವ ಸಂತೋಷ. ಮನಸ್ಸಿಗೆ ಬಂದ ದರ ಹೇಳುತ್ತ, ತಮಗೆ ಬೇಕಾದವರಿಗೇ ಮಣೆ ಹಾಕುವ ಆ ಖಾಸಗಿ ಬಸ್ಸುಗಳ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಬಹುದಲ್ಲ ಎನ್ನುವ ತೃಪ್ತಿ. ಕೆಲಸ ಆಮೆವೇಗದಲ್ಲಿ ನಡೆಯುತ್ತಿದ್ದರೂ ದಿನಾ ಅಲ್ಲಿನ ಅಗೆಯುವ, ಮುಚ್ಚುವ ಕೆಲಸಗಳನ್ನು ಆಸಕ್ತಿಯಿಂದ ನೋಡುತ್ತಿದ್ದುದು. ಕೊನೆಗೊಮ್ಮೆ ಎಲ್ಲ ಕೆಲಸ ಮುಗಿದು ಪ್ರಾಯೋಗಿಕವಾಗಿ ಓಡಾಡುತ್ತಿದ್ದ ಪ್ರತಿ ಟ್ರೈನು ಬರುವಾಗಲೂ ನಾಲ್ಕೈದು ಸ್ಟೇಷನ್ನಿನ ಹಿಂದಿನಿಂದಲೇ ಅದರ ಹಾರ್ನು ಕೇಳಿ ಮುಕ್ಕಾಲು ಮೈಲಿ ದೂರದ ಮನೆಯಿಂದ ಓಡೋಡಿ ಬರುತ್ತಿದ್ದುದು. ಬಹಳಷ್ಟು ಸಲ ಹಾಗೆ ಇವನು ಬರುವಾಗ ಟ್ರೈನು ಇವರೂರಿನ ಸ್ಟೇಷನ್ನನ್ನು ದಾಟಿರುತ್ತಿದ್ದು, ಇವನಿಗೆ ನಿರಾಸೆಯುಂಟಾಗುತ್ತಿದ್ದುದು.

ಹೈಸ್ಕೂಲಿನಲ್ಲಿ ಕಲಿಯುತ್ತಿದ್ದನಷ್ಟೆ. ಯಾರು ಯಾರದೋ ಮನೆಯಲ್ಲಿದ್ದು ಓದುವಾಗ ಮಾರ್ಕುಗಳನ್ನು ಗಳಿಸುವುದೊಂದೇ ಧ್ಯೇಯವಾಗಿದ್ದರೂ ಇವನಿದ್ದ ನೆಂಟರ ಮನೆಯ ಸಾಲಿನಲ್ಲೇ ಕೊನೆ ಮನೆಯಲ್ಲಿದ್ದ ಆ ಶ್ರೀಮಂತರ ಹುಡುಗಿ ಇವನಿಗೆ ಮೋಡಿ ಮಾಡಿದ್ದಳು. ತನ್ನ ಇರಸ್ಥಿಕೆಯ ಪೂರ್ಣ ಜ್ಞಾನವಿದ್ದ ಅವನು ಮುಂದುವರಿಯಲು ಹೆದರಿದರೂ ಶ್ರೀಮಂತಿಕೆಯ ಸುಪ್ಪತ್ತಿಗೆಯಲ್ಲಿ ಬೆಳೆದ ಆಕೆಗೇನೂ ಅಂತಹ ತಡೆಗಳಿರಲಿಲ್ಲ. ಹತ್ತಿರವಿದ್ದ ಮನೆಗಳಿಂದ ಹೊರಡುತ್ತಿದ್ದ ಅವರಿಬ್ಬರೂ ಸ್ವಾಭಾವಿಕವಾಗಿಯೇ ಶಾಲೆಗೆ ಒಟ್ಟಿಗೇ ಹೋಗುತ್ತಿದ್ದರು. ಹಾಗೆ ಹೋಗುವಾಗ ಮತ್ತು ಬರುವಾಗ ಅಕ್ಕ ಪಕ್ಕದಲ್ಲಿ ಯಾರೂ ಇಲ್ಲವೆಂದಾಗಲೆಲ್ಲ ಅವಳು ಇವನಿಗೆ ಅಂಟಿಕೊಂಡೇ ನಡೆಯುತ್ತಿದ್ದಳು. ಬೇಕು ಬೇಕೆಂದೇ ಎಡವಿದಂತೆ ಮಾಡಿ ಮೈ ಮೇಲೆ ಬೀಳುತ್ತಿದ್ದಳು. ಹಾಗೆ ಬಿದ್ದಾಗಲೆಲ್ಲ ಇವನು ಎತ್ತಿ ಹಿಡಿಯುತ್ತಿದ್ದ ಮತ್ತು ಆಕೆ ಆ ಆನಂದವನ್ನು ಸವಿಯುತ್ತಿದ್ದಳು. ಹೊರಗಿನಿಂದ ಇಂತಹುದೆಲ್ಲ ತನಗೆ ಬೇಡ ಎಂದು ತೋರಿಸಿಕೊಂಡರೂ ಒಳಗೊಳಗೇ ಅವನೂ ಆನಂದಿಸುತ್ತಿದ್ದ. ಸ್ಪೆಶಲ್ ಕ್ಲಾಸುಗಳೋ